**ಹಿತ್ತಲ ಜಗುಲಿಯಲ್ಲಿ ಅವಳು ಕಾಲು ಇಳಿಬಿಟ್ಟುಕೊಂಡು ಕೂತಿದ್ದಳು. ಹಿಂದೆ ಒಂದು ಸ್ಟೂಲ್ ಹಾಕಿಕೊಂಡು ಕೂತ ಶೀನಿ ಮಾವ ಅವಳ ತಲೆಗೂದಲಿಗೆ ಆಸ್ಥೆಯಿಂದ ಮದರಂಗಿ ಹಚ್ಚತೊಡಗಿದ್ದ...**

ಪರಸ್ತ್ರೀ ವ್ಯಾಮೋಹವಿಲ್ಲದ, ಹೊಡೆಯದ, ಬಡಿಯದ, ಕುಡಿಯದ, ಹೆಂಡತಿ ಹಾಕಿದ ಗೆರೆ ದಾಟದ ಗಂಡ ಒಳ್ಳೆಯವನೆಂದಾದರೆ ಶ್ರೀಪಾದ ನಿಜಕ್ಕೂ ಒಳ್ಳೆಯವನೇ. ಯೋಗ್ಯನೇ. ಆದರೆ, ಇವೆಲ್ಲವನ್ನೂ ಮೀರಿದ ಅವ್ಯಕ್ತ ಅಪೇಕ್ಷೆಯೊಂದು ಹೆಣ್ಣಿನ ಒಳಮನಸ್ಸನ್ನು ವಶವರ್ತಿಯಾಗಿಸಿಕೊಂಡಿದ್ದರೆ ಅದು ತಪ್ಪು ಎನ್ನಲಾಗುತ್ತದೆಯೇ? ತಪ್ಪೇ? ಪುರಾಣೇತಿಹಾಸಗಳಲ್ಲಿ, ಪ್ರಸ್ತುತ ಕಾಲಮಾನದಲ್ಲೂ ಪರಪುರುಷರ ಕುರಿತಾಗಿ ಮನಸ್ಸು ವಾಲಿದವರ ಕತೆಗಳಿಲ್ಲವೇ? ಗುಲಗುಂಜಿಯಷ್ಟೂ ಕುಂದಿಲ್ಲದ ಗಂಡ ಮಗ್ಗುಲಲ್ಲಿದ್ದರೂ ಅವನನ್ನು ಕಡೆಗಣಿಸಿ ಎಂತೆಂಥವರನ್ನೋ ಅವರು ಹಂಬಲಿಸಿದ್ದು, ಹಂಬಲಿಸುವುದು ಯಾಕೆ? ಸ್ತ್ರೀ ಪುರುಷರ ನಡುವಿನ ಸೆಳೆತ ಅಂದರೆ ಹೀಗೇ ಎಂದು ಅರ್ಥೈಸಲಾಗದ ನಿಗೂಢ. ಗಂಡಿನ ಕುರಿತಾದ ಹೆಣ್ಣಿನ ನಿರೀಕ್ಷೆಗಳು ಇಂಥವೇ ಎಂದು ಭಾಷ್ಯ ಬರೆಯಲು ಸೃಷ್ಟಿಸಿದ ವಿಧಾತನಿಗೂ ಸಾಧ್ಯವಿಲ್ಲವೇನೋ, ಬಹುಶಃ. ಶ್ರೀಪಾದನ ಕುರಿತಾಗಿ ತನ್ನಲ್ಲಿ ಬೆಳೆಯುತ್ತಿರುವ ಅಸಹನೆಯಂತಹ ಭಾವನೆಯಿಂದ ಹೀಗೆ ಏನೇನೋ ಅನಿಸುತ್ತದೆ ಪ್ರಭಾವತಿಗೆ. ಅವನ ಜೊತೆ ಸಂಸಾರ ಸಾಗುತ್ತಾ ಬಂದಂತೆ ಯಾವುದೋ ಅತೃಪ್ತಿಯೊಂದು ಅವಳನ್ನು ಆವರಿಸಿಕೊಳ್ಳುತ್ತಾ ಬಂತು. ಉಪ್ಪು ಹುಳಿಯಿಲ್ಲದ ಪಥ್ಯದೂಟದಂತೆ ಬದುಕು ಸಪ್ಪೆಯೆನಿಸತೊಡಗಿತು. ಅವಳ ಚಟುವಟಿಕೆಯ ನಡತೆಗಳಿಗೂ, ಶ್ರೀಪಾದನ ಸಮಚಿತ್ತತೆಗೂ ತಾಳಮೇಳವಿಲ್ಲದಂತಾಗತೊಡಗಿತ್ತು. ಕೊನೇಪಕ್ಷ ಒಂದು ದಿನವಾದರೂ ಈ ಗಂಡ ತನ್ನೊಡನೆ ಜಗಳವಾಡಲಿ, ಮುನಿಸಿಕೊಳ್ಳಲಿ, ದೂರ ಸರಿದು ಮಲಗಲಿ ಎನ್ನುವಂಥ ಅಪೇಕ್ಷೆಗಳು ಸ್ತ್ರೀಸಹಜವಾದುದಲ್ಲವೇ? ತಾನು ಎಲ್ಲರಂತಲ್ಲವೇ ಅಥವಾ ಕತೆಪುಸ್ತಕಗಳನ್ನು ಓದಿ ಓದಿ ಮರುಳಾಗಿದ್ದು ಜಾಸ್ತಿಯಾಯ್ತೇ? ಅರ್ಥವಾಗುವುದಿಲ್ಲ ಪ್ರಭಾವತಿಗೆ. ಮನಸ್ಸಲ್ಲೊಂದು ಸದಾ ಕಾಡುವ ವ್ಯಗ್ರ ಭಾವನೆ. ಮುನಿಸಿನ ಅನಂತರದ ಸಾಂತ್ವನದ ಸುಖ, ವಿರಹದ ಅನಂತರದ ಒಲವಿನ ಸುಖ, ಭಿನ್ನಾಭಿಪ್ರಾಯದ ಅನಂತರದ ಒಮ್ಮತದ ಸುಖ, ಯಾವುದೂ ಇಲ್ಲ. ಸಾರಿಗೆ ಉಪ್ಪು ಜಾಸ್ತಿಯಾದರೂ, ಬೇಕೆಂದೇ ಕೈ ಮೀರಿ ಬಿದ್ದರೂ, ತುಟಿಪಿಟಕ್ಕೆನ್ನುವವನಲ್ಲ ಶ್ರೀಪಾದ. "ಏನೋ ಒಂದೊಂದು ದಿನ ಪರಾಮೋಷಿ ಆಗುತ್ತಪ್ಪಾ..." ಎನ್ನುತ್ತಾ ಹೆಂಡತಿ ಕಿರಿಕಿರಿ ಅನುಭವಿಸದಂತೆ ಒಪ್ಪಿಟ್ಟುಕೊಳ್ಳುತ್ತಿದ್ದ. ಈ ಸ್ಥಿತಪ್ರಜ್ಞನನ್ನು ಯಾವತ್ತೂ ತಾನು ಕೆರಳಿಸಲಾರೆ ಎನ್ನುವ ಹತಾಶೆಯ ಸ್ಥಿತಿಯಲ್ಲಿ ಸಂದರ್ಭಕ್ಕೊದಗಿ ಬಂದವನು ಶೀನಿ ಮಾವ. ಮಹಾ ಜೀವನೋತ್ಸಾಹದ ಮನುಷ್ಯ. 'ಮರದ ಬಾಯಾಗಿದ್ದರೆ ಒಡೆದು ಹೋಗುತ್ತಿತ್ತು' ಎನ್ನುವಂಥ ಮಾತಾಳಿ. ಅಡುಗೆಮನೆಯ ಗೋಡೆಯೊತ್ತಿಗೆ ಒಂದು ಮಣೆ ಹಾಕಿಕೊಂಡು ಗೋಡೆಗೊರಗಿ ಕೂತರೆ ಊರ ಪುರಾಣವೆಲ್ಲಾ ರಂಗುರಂಗಾಗಿ ಬಿಚ್ಚಿಕೊಳ್ಳುತ್ತಿತ್ತು. 'ಎಲ್ಲರ ಮನೆ ದೋಸೇನೂ ತೂತು. ಕಂಡೋರ ವಿಷಯ ಕಟ್ಟಿಕೊಂಡು ನಮಗೇನು?' ಎನ್ನುವ ನಿರ್ಲಿಪ್ತ ಸ್ವಭಾವದ ಶ್ರೀಪಾದನಿಗೆ ಇವನು ತದ್ವಿರುದ್ಧ. 'ಅದು ಹಾಗೇ ಆಗಿದ್ದು...' ಎನ್ನುವಂತೆ ತೀರ್ಪು ಕೊಡುವವನ ವರಸೆಯಲ್ಲಿ ಮಾವ ಯಾರದೋ ಮನೆಯ ಹುಳುಕನ್ನು ಕೆದಕುತ್ತಿದ್ದರೆ ಕೇಳುವವಳಿಗೆ ಬಲು ರುಚಿ. ಬೇರೆಯವರ ಮನೆಯ ಒಳಗುಟ್ಟುಗಳನ್ನು ಚಪ್ಪರಿಸದವರು ಎಷ್ಟಿದ್ದಾರು ಲೋಕದಲ್ಲಿ? ಶ್ರೀಪಾದನಂತಹ ಅಪರೂಪದಲ್ಲಿ ಅಪರೂಪದವರು ಇಲ್ಲವೇ ಇಲ್ಲವೆಂಬಷ್ಟು ಕಮ್ಮಿ. ಅರಿಷಡ್ವರ್ಗಗಳಿಂದ ಕೂಡಿದ ಹುಲುಮಾನವರು ಅಂದ ಮೇಲೆ